ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ.3268/2023

ಸಿ.ಡಬ್ಲ್ಯೂ -02
ಪಿ.ಡಬ್ಲ್ಯೂ-02

**ಸಾಕ್ಷಿಗೆ ದಿಃ 08.09.2025ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಟಿ.ಎಂ.ಎಸ್. ವಕೀಲರಿಂದ.**

ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಿದ್ದಯ್ಯನಕೆರೆ ಪಾಳ್ಯಕ್ಕೂ ಸರ್ವೆ ನಂ.127ಕ್ಕೂ ಎಷ್ಟು ಅಂತರವಿದೆ ಎಂದರೆ ಸಾಕ್ಷಿ ಸರ್ವೆ ನಂ.127ರಲ್ಲಿ ನಮ್ಮ ಮನೆ ಮತ್ತು ಊರು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ್ ಚಿಕ್ಕಮಾವತ್ತೂರುನಲ್ಲಿ ಇರುತ್ತದೆ ಸದರಿ ಸರ್ವೆ ನಂಬರಿನಲ್ಲಿ 400 ಎಕರೆ ಜಮೀನು ಇರುತ್ತದೆ. ಸರ್ವೆ ನಂ.127 ನಮಗೆ ಜಮೀನು ನಮ್ಮ ತಂದೆ ಖರೀದಿಸಿದ್ದರಿಂದ ಬಂದಿರುತ್ತದೆ. ನಮ್ಮ ತಂದೆಗೆ ನಾಲ್ಕು ಐಟಂ ಗಳಲ್ಲಿ ಆಸ್ತಿ ಇರುತ್ತದೆ. ಸದರಿ ಆಸ್ತಿ ಬೇರೆ ಬೇರೆ ಕಡೆ ತುಂಡು ಜಮೀನು ಆಗಿರುತ್ತದೆ. ಚಾ.ಸಾ.1ರವರ ಜಮೀನಿನೆಗೆ ಹೊಂದಿಕೊಂಡಂತೆ ನಿಮ್ಮ ಜಮೀನು ಇದೆ ಎಂದರೆ ಸಾಕ್ಷಿ ಅವರ ಜಮೀನನ್ನು ದಾಟಿದ ಬಳಿಕ ನಮ್ಮ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ.

ನಮ್ಮ ಜಮೀನು ಮತ್ತು ಚಾ.ಸಾ.1ರವರ ಜಮೀನಿನ ನಡುವೆ ಚಾ,ಸಾ.1ರವರ ಚಿಕ್ಕಮ್ಮನವರ ಜಮೀನು ಇರುತ್ತದೆ. ಸರ್ವೆ ನಂ.127ರಲ್ಲಿ ಒಟ್ಟು 05 ಎಕರೆ ಆಸ್ತಿ ನಮಗೆ ಇರುತ್ತದೆ. 01 ಎಕರೆ 35 ಗುಂಟೆ ಜಮೀನು 1ನೇ ಆರೋಪಿಯ ಜಮೀನಿಗೆ ಹೊಂದಿಕೊಂಡಂತೆ ಖರೀದಿಮಾಡಿರುತ್ತೇವೆ. ಸದರಿ ಜಮೀನಿಗೆ ರಸ್ತೆ ಇರುವುದಿಲ್ಲ ಎಂದರೆ ಸಾಕ್ಷಿ ಮೊದಲು ರಸ್ತೆ ಇರಲಿಲ್ಲ ಈ ಪ್ರಕರಣ ದಾಖಲಾದಾಗ 2023ರಲ್ಲಿ ಮಾಡಿಸಿಕೊಂಡಿರುತ್ತೇ ಎಂದು ನುಡಿಯುತ್ತಾರೆ. ನಮಗೂ ಮತ್ತು 1 ಆರೋಪಿಗೂ ಅವರ ಜಮೀನಿಗೆ ಹೋಗುವ ವಿಚಾರಕ್ಕೆ ದ್ವೇಷ ಇರುತ್ತದೆ ಎಂದರೆ ಸಾಕ್ಷಿ ಬದುವಿನ ಮೇಲೆ ನಡೆದುಕೊಂಡು ಹೋಗುತ್ತಿದ್ದರು ಆಗ ಅವರು ಬೈಯುತ್ತಿದ್ದರು ಹಾಗಾಗಿ ದ್ವೇಷ ಇರುತ್ತದೆ ಎಂದು ನುಡಿಯುತ್ತಾರೆ.

ರಸ್ತೆಯನ್ನು ಸಬ್ ಇನ್ಸ್ ಪೆಕ್ಟರ್ ಮಾಡಿಸಿರುತ್ತಾರೆ. ಅವರ ಹೆಸರು ಗೊತ್ತಿಲ್ಲ. ಹುಲಿಯೂರುದುರ್ಗ ಠಾಣೆಯ ಸಬ್ ಇನ್ಸ್ ಪೆಕ್ಟರ್ ಆಗಿರುತ್ತಾರೆ. ಜೆಸಿಬಿಯಲ್ಲಿ ರಸ್ತೆ

ಮಾಡಿರುತ್ತಾರೆ. ಈಗ ನಿಮ್ಮ ಜಮೀನಿನವರೆಗೆ ರಸ್ತೆ ಇದೆ ಎಂದರೆ ಸಾಕ್ಷಿ ನಮ್ಮ ಜಮೀನುಬಿಟ್ಟು ಮುಂದಕ್ಕೂ ರಸ್ತೆ ಇದೆ ಎಂದು ನುಡಿಯುತ್ತಾರೆ. ದಿಃ08.08.2023ರ ನಂತರ ಎರಡು ದಿನಗಳ ಬಳಿಕ ರಸ್ತೆ ಮಾಡಿರುತ್ತಾರೆ. ಜೆಸಿಬಿಯನ್ನು ತರಿಸಿ ಚಾ.ಸಾ.1ರವರು ಮತ್ತು ರಮೇಶ್‌ರವರು ಸೇರಿಕೊಂಡು ರಸ್ತೆಯನ್ನು ಮಾಡಿಸಿರುತ್ತಾರೆ. ನಾನು ಯಾವುದೇ ಹಣ ನೀಡಿರುವುದಿಲ್ಲ.

ಸಿದ್ದಯ್ಯನಕೆರೆ ಪಾಳ್ಯದಲ್ಲಿ 24-25 ಮನೆಗಳು ಇರುತ್ತವೆ. 100 ರಿಂದ 150 ಜನಸಂಖ್ಯೆ ಇರುತ್ತದೆ. ಚಿಕ್ಕಮಾವತ್ತುರಿಗೂ ಸರ್ವೆ ನಂ.127ಕ್ಕೂ 02 ಕಿ.ಮೀ ಅಂತರವಿರುತ್ತದೆ. ನೀರಿನ ತೊಟ್ಟಿಯ ಜಾಗಕ್ಕೂ ನಮ್ಮ ಮನೆಗೂ ಅರ್ಧ ಕಿ.ಮೀ ದೂರವಿರುತ್ತದೆ. ಗಲಾಟೆ ಆಗಿದೆ ಎನ್ನಲಾದ ಸಮದಲ್ಲಿ ನಾನು ಚಾ.ಸಾ.1 ಆರೋಪಿ ಮತ್ತು ಉಮೇಶ್ ರವರು ಇದ್ದೆವು. ಉಮೇಶ್ ರವರು ಚಿಕ್ಕಮಾವತ್ತೂರಿನವರು ಆಗಿರುತ್ತಾರೆ. ಘಟನೆ ನಡೆದ ನಂತರ ಮೊದಲು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ. ನಂತರ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ. ನಾನು ಠಾಣೆಗೆ ಹೋಗಿರುವುದಿಲ್ಲ. ಆಸ್ಪತ್ರೆಗೆ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಹೋಗಿರುತ್ತೇವೆ. ನಾವು ಆಸ್ಪತ್ರೆಗೆ ಹೋದಾಗ ಪುರುಷ ವೈದ್ಯರು ಆಸ್ಪತ್ರೆಯಲ್ಲಿ ಇದ್ದರು ಅವರ ಹೆಸರು ಗೊತ್ತಿಲ್ಲ. ವೈದ್ಯರು ಪರೀಕ್ಷೆ ಮಾಡಿ ಚಿಕಿತ್ಸೆ ನೀಡಿ ಮಾತ್ರೆ ನೀಡಿರುತ್ತಾರೆ. ವೈದ್ಯರು ಔಷಧಿ ಚೀಟಿ ಮತ್ತು ಪೊಲೀಸ್ ಠಾಣೆಗೆ ದೂರು ನೀಡುವಂತೆ ಚೀಟಿ ಬರೆದುಕೊಟ್ಟಿರುತ್ತಾರೆ.

ಆಸ್ಪತ್ರೆಯಲ್ಲಿ ಸುಮಾರು 2-3 ಗಂಟೆಗಳ ಕಾಲ ಇದ್ದೆವು. ವೈದ್ಯರನ್ನು ಭೇಟಿ ಮಾಡಿ ಚಿಕಿತ್ಸೆ 12.00 ಗಂಟೆಯ ಒಳಗೆ ಪಡೆದಿರುತ್ತೇವೆ. ವೈದ್ಯರು ನಮಗೆ ಚೀಟಿ ಬರೆದುಕೊಟ್ಟಿದ್ದಲ್ಲದೇ ಬೇರೆ ವ್ಯವಹರಣೆ ಮಾಡಿರುವುದಿಲ್ಲ. ಈ ಪ್ರಕರಣದ ವಿಚಾರವಾಗಿ ನಾನು ಠಾಣೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿ ಪೊಲೀಸರು ಘಟನೆಯಾದ ಎರಡು ದಿನಗಳ ಬಳಿಕ ಸ್ಥಳಕ್ಕೆ ಬಂದಾಗ ಹೇಳಿಕೆ ನೀಡಲು ಹೋಗಿರುತ್ತೇನೆ. ನಂತರದದಲ್ಲಿ ಠಾಣೆಗೆ ನಾನು ಹೋಗಿರುವುದಿಲ್ಲ ಸಾಕ್ಷಿ ದೂರು ನೀಡಿದ ದಿನ ಸಂಜೆ ಠಾಣೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಪೊಲೀಸರು ಸ್ಥಳಕ್ಕೆ ಬಂದಾಗ ನಾನು, ಚಾ.ಸ.1 ಮತ್ತು ಹುಲಿಯೂರುದುರ್ಗದಿಂದ 2 -3 ಜನ ಸುಮಾರು 12.00 ರಿಂದ 1.00 ಗಂಟೆ ಸಮಯಕ್ಕೆ ಬಂದಿದ್ದರು. ಅವರ ಹೇಳಿಕೆಯನ್ನೂ ಸಹ ಪಡೆದಿರುತ್ತಾರೆ. ಪೊಲೀಸರು ಕುಡ್ಲು ಮತ್ತು ಕಲ್ಲನ್ನು ತೆಗೆದುಕೊಂಡು ಹೋಗಿರುತ್ತಾರೆ. ಅಲ್ಲಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಅಲ್ಲಿ ಪೊಲೀಸರು ಇನ್ನೂ ಇಬ್ಬರ ಮುಸ್ಲಿಂ ರವರ ಸಹಿ ಪಡೆದಿರುತ್ತಾರೆ.

ಪೋಲಿಸರು ಸಹಿ ಪಡೆದಿದ್ದನ್ನು ಹೊರತುಪಡಿಸಿ ಗಲಾಟೆ ಬಗ್ಗೆ ವಿಚಾರ ಮಾಡಿ ಹೋಗಿರುತ್ತಾರೆ. ಫೋಟೋ ತೆಗೆದಿರುತ್ತಾರೆ. ಕುಡ್ಲು ಮತ್ತು ಕಲ್ಲನ್ನು ಠಾಣೆಗೆ ನಾವು ತೆಗೆದುಕೊಂಡು ಹೋಗಿ ನೀಡಿದ್ದು, ಅದನ್ನು ಪುನಃ ಸ್ಥಳಕ್ಕೆ ತೆಗೆದುಕೊಂಡು ಬಂದು ಪುನಃ

ತೆಗೆದುಕೊಂಡು ಹೋಗಿರುತ್ತಾರೆ. ದಿಃ08.08.2023ರಂದು ನಾವು ಆರೋಪಿತರು ಅವುಗಳಿಂದ ಹಲ್ಲೆ ಮಾಡಿರುವುದಾಗಿ ತೆಗೆದುಕೊಂಡು ಹೋಗಿ ನೀಡಿರುತ್ತೇವೆ. ಘಟನಾ ಸ್ಥಳಕ್ಕೆ ಹೋಗಿ ಅಳತೆ ಮಾಡಲು ಪೊಲೀಸರು ಟೇಪ್ ತಂದಿರುವುದಿಲ್ಲ. ಪೊಲೀಸರು ನಕ್ಷೆ ರೂಪದಲ್ಲಿ ಬರೆದುಕೊಂಡರು. ಬರೆದುಕೊಂಡವರ ಹೆಸರು ನನಗೆ ಗೊತ್ತಿಲ್ಲ. ಇಬ್ಬರು ಪೊಲೀಸರು ಸ್ಥಳಕ್ಕೆ ಬಂದಿದ್ದರು. ರಸ್ತೆ ವಿಚಾರಕ್ಕೆ ಗಲಾಟೆ ಆಗಿದ್ದು ಎಂದು ಹೇಳಿದ್ದು ಸದರಿ ರಸ್ತೆಯನ್ನು ಪೊಲೀಸರು ನೋಡಿರುವುದಿಲ್ಲ. 2-3ದಿನಗಳ ಬಳಿಕ ಪೊಲೀಸರು ಬಂದು ರಸ್ತೆ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ.

ಈ ದಿನ ನಾನೇ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಕಳೆದ ಬಾರಿ ನನ್ನ ಸಾಕ್ಷಿ ವಿಚಾರಣೆ ಆದಾಗ ಚಾ.ಸಾ.1ರವರು ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಈದಿನ ಸದರಿಯವರು ನಿಮ್ಮನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂರದೆ ಸಾಕ್ಷಿ ಅವರು ಬಂದಿದ್ದು ನನ್ನೊಂದಿಗೆ ಬಂದಿಲ್ಲ ಎಂದು ನುಡಿಯುತ್ತಾರೆ. 1 1/2 ಅಡಿ ಒಳಗೆ ಕುಡ್ಲು ಇತ್ತು. ಬಲಗಣ್ಣಿನ ಹುಬ್ಬಿನ ಮೇಲೆ ಹೊಡೆದಿದ್ದು, ಹುಬ್ಬಿಗೆ ಮತ್ತು ಮೂಗಿಗೆ ಗಾಯವಾಗಿರುತ್ತದೆ. ಚಾ.ಸಾ.1ರವರು ಗಲಾಟೆಯಾದಾಗ ಹಸಿರುಬಣ್ಣದ ಬಟ್ಟೆ ಧರಿಸಿದ್ದು ಸದರಿ ಬಟ್ಟೆ ರಕ್ತವಾಗಿತ್ತು. ಸದರಿ ಬಟ್ಟೆಯನ್ನು ಪೊಲೀಸರಿಗೆ ಚಾ.ಸಾ.1ರವರು ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಕ್ತಕಲೆಯಾದ ಬಟ್ಟೆಯಲ್ಲಿಯೇ ಠಾಣೆಗೆ ಹೋಗಿರುತ್ತಾರೆ. ಪೊಲೀಸರು ಆದಿನ ಬಟ್ಟೆಯನ್ನು ಕೇಳಿರುವುದಿಲ್ಲ. ಸಿದ್ದಯ್ಯನಕೆರೆ ನೀರಿನ ತೊಟ್ಟಿಗೂ ಚಂದ್ರಯ್ಯನ ಮನೆಗೂ 50 ಮೀಟರ್ ಅಂತರವಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.